'ಏನಮ್ಮಾ, ಹುಡುಗೀ... ಹೇಗಿದ್ದೀ? ಯಾವಾಗ ಮದುವೆ?'

'ಮದುವೇನಾ, ಸರ್–ಜೀ? ನನ್ನದಾ?' ನನ್ನಷ್ಟೇ ಸಲೀಸಾಗಿ ಉತ್ತರಿಸಿದ್ದಳು.

'ನಿನ್ನದೇ? ನಾನೇನು ಇನ್ನೊಂದು ಮದುವೆ ಮಾಡಿಕೊಳ್ಳೋಕಾಗುತ್ತಾ?!'

ತಬ್ಬಿಬ್ಬಾದಳಾದರೂ, ಸುಧಾರಿಸಿಕೊಂಡು – ಎಂದಿನಷ್ಟೇ ಮಾದಕವಾಗಿ ನಕ್ಕು, 'ಮದುವೆ ಆದಾಗ ಹೇಳುತೀನಿ, ಸರ್–ಜೀ... ನಿಮಗೆ ಹೇಳದೆಯೇ ಆಗೋದುಂಟಾ?' ಅನ್ನುತ್ತ ಚಂದದ ಹಕ್ಕಿಯ ಹಾಗೆ ನಕ್ಕಳು. 'ಈಗ ಹೇಳಿ... ಕೆನ್ನೈ ಸಿಟ್ ವಿತ್ಯು ಫಾರ್ ಸಮ್‌ಟೈಮ್?' ಎಂದು ಕೇಳಿ, ನನ್ನ ಅನುಮತಿಗೆ ಮೊದಲೇ ಮೇಜಿನಾಚೆಯ ಛೇರೆಳೆದುಕೊಂಡು ಕುಳಿತಳು. ನಾನೂ ಪಟ್ಟುಬಿಡದೆ, 'ಮೊದಲು ನಿನ್ನ ಗಂಡ ಹೇಗಿದ್ದಾನೆ, ಹೇಳೂ...' ಅನ್ನುತ್ತ ಮಾತಿಗೆಳೆದೆ.

'ಆಗ್ನೇಯಾನಾ, ಸರ್–ಜೀ? ಅವನಿಗೇನಾಗಿದೆ... ಚೆನ್ನಾಗೇ ಇದ್ದಾನೆ...' ಈ ಮಾತು ಹೇಳುವಾಗ, ಹೌದೋ ಅಲ್ಲವೋ ಅನ್ನುವಷ್ಟು ಗಂಭೀರವಾದಳು. 'ಅದನ್ನೇ ಹೇಳಲಿಕ್ಕೆ ಬಂದಿದ್ದೀನಿ...' ಇನ್ನಿರದ ಹುಷಾರು ತಾಳಿದಳು. 'ಒಂದು ಹತ್ತು ನಿಮಿಷ ಟೈಮಿದೆ ಅಲ್ಲವಾ?'

ತಕ್ಷಣ ಮೊಬೈಲು ಸೈಲೆಂಟುಗ್ಗೈದು – 'ಸರಿ... ಈಗ ಹೇಳು...' ಎಂದು ಹೇಳಿದೆ. ವಿಷಯವೇನೆಂದು ಕುತೂಹಲಿಸಿ ಕಿವಿಯೊಡ್ಡಿದೆ.

'ಇಟ್ಸ್ ಆಲ್ ಆಫ್, ಸರ್–ಜೀ... ಯಾಕೋ ಸರಿ ಬರುತಿಲ್ಲ... ನನ್ನ ಅಮ್ಮ ಒಪ್ಪುತಾ ಇಲ್ಲ. ಅವಳಿಗೆ ಆಗ್ನೇಯ ಒಂದಿಷ್ಟೂ ಇಷ್ಟ ಆಗಲಿಲ್ಲ...' ಕೊಂಚ ಅಧೀರಳಾದಳು. ಕಣ್ಣುಗಳಲ್ಲಿ ತೇವ ಹಬ್ಬಿತು.

'....?!'

'ಹೌದು, ಸರ್–ಜೀ... ನಾನು ಬರೀ ನನ್ನ ಅಗತ್ಯವನ್ನಷ್ಟೇ ನೋಡಬಾರದಲ್ಲವಾ? ಈ ಇಪ್ಪತ್ತನಾಲ್ಕು ವರ್ಷಗಳಲ್ಲಿ ನನ್ನ ಅಮ್ಮ ನನ್ನ ಸಲುವಾಗಿ ಏನೇನೆಲ್ಲ ಮಾಡಿದ್ದಾಳೆ, ಗೊತ್ತಾ? ಅವಳಿಗೆ ಇಷ್ಟ ಇಲ್ಲ ಅಂದಮೇಲೆ ನನಗೇಕೆ ಬೇಕು ಹೇಳಿ? ಇಪ್ಪತ್ತಮೂರು ವರ್ಷಗಳ ಸಂಬಂಧ ದೊಡ್ಡದೋ, ಇಲ್ಲಾ ಬರೇ ಹದಿನೆಂಟು ತಿಂಗಳ ಇವನೊಡನೆಯ ರಿಲೇಶನ್‌ಶಿಪ್ ದೊಡ್ಡದೋ? ಇವನ ಸಲುವಾಗಿ ನಾನು ನನ್ನ ಅಮ್ಮನ್ನ ಬಿಟ್ಟುಕೊಡೋದಿಲ್ಲ, ಸರ್–ಜೀ....' ಧ್ವನಿಯಲ್ಲಿ ಗದ್ಗದವಿದ್ದರೂ ಇರಾದೆಯಲ್ಲಿ ಗಟ್ಟಿ ನಿರ್ಣಯವಿದ್ದಿತು.

'ಏನು ಕುಣಾಲಿ, ನೀನು? ಪ್ರೀತಿ ಪ್ರೇಮ ಪ್ರಣಯ... ಅಂದರೆ ಹುಡುಗಾಟ ಅಂದುಕೊಂಡಿದ್ದೀಯಾ? ಐ ಕಾನ್ಟ್ ಬಿಲೀವ್ ದಿಸ್...' ಅಚ್ಚರಿಯಿಂದ ಕೇಳಿದೆ.

'ಐ ಹ್ಯಾವ್ ನಾಟ್ ಡಂಪ್ಡ್ ಹಿಮ್ ಎಟ್ ಆಲ್, ಸರ್–ಜೀ... ಆದರೆ ನಾನು ಮನಸ್ಸು ಮಾಡಿದೀನಿ. ಈ ಸಂಬಂಧಕ್ಕೆ ಅರ್ಥ ಇರಲ್ಲ...'

'.....!!'

'ನನ್ನ ಅಮ್ಮ ನನ್ನ ಸಲುವಾಗಿ ತನ್ನ ಬದುಕನ್ನೇ ತೆತ್ತುಕೊಂಡಿದ್ದಾಳೆ... ಅವಳಿಗೂ ನನ್ನ ಅಪ್ಪನಿಗೂ ಯಾವೊತ್ತೂ ಆಗಿಬಂದಿರಲಿಲ್ಲ... ಇವೊತ್ತಿಗೂ ಆಗಿಬರೋದಿಲ್ಲ. ಇಬ್ಬರದೂ ಒತ್ತಾಯದ ಮದುವೆ... ಒತ್ತಾಯದ ಸಂಸಾರ... ಆದರೆ ನನ್ನ ಸಲುವಾಗಿ ಅವಳು ತನ್ನ ಮದುವೆಯಲ್ಲಿ ಉಳಿದಿದ್ದಾಳೆ...' ಸಣ್ಣಗೆ ಅಳತೊಡಗಿದಳು. ಒತ್ತಾಯದಿಂದ ದುಃಖದ ಸದ್ದು ತಡೆದಳು. '... ಇಂತಹ ಅವಳನ್ನ ನಾನು ನೋಯಿಸಬಾರದಲ್ಲವಾ? ನೋಯಿಸಿದರೆ ನನ್ನ ದಾಂಪತ್ಯ ಚೆನ್ನಾಗಿರುತ್ತಾ?' ಕಟ್ಟುನಿಟ್ಟಾಗಿ ಹೇಳಿದಳು. 'ಪ್ಲೀಸ್ ಡೋಂಟ್ ತಿಂಕ್, ದಿಸ್ ವಾಸ್ ಜಸ್ಟ್ ಎ ಫ್ಲಿಂಗ್ – ಸರ್–ಜೀ... ಅಯಾಮ್ ಸೀರಿಯಸ್! ಆಗ್ನೇಯ ನನ್ನ ಮಟ್ಟಿಗೆ ಎಲ್ಲ